ನಿನ್ನ ಕಲೆಯ ಪ್ರದರ್ಶನ ಮಾಡಿದರೆ ನೀನು ಸಾಯೋ ತಂಕ ಪಿಂಚಣಿ ತಗಬೌದು ಎಂದು ಆಸೆ ಹುಟ್ಟಿಸಿ ಏನೂ ಬೇಜಾರಾಗಬೇಡ, ನಾನೂ ಕಾನೂನು ಪಾಲಿಸಬೇಕಲ್ವಾ? ನೀನು ಇಂತಾ ದಿನ ನಮ್ಮ ಆಫೀಸಿಗೆ ಬಾ ಕಮಿಟಿ ಸೇರಿರುತ್ತೆ. ನಿಮ್ಮ ಪಿಂಚಣಿ ತೀರ್ಮಾನನ ಅದು ಮಾಡುತ್ತೆ ಎಂದು ಹೇಳಿ ಹೊರಟುಹೋದರು.

ಹನುಮಂತಣ್ಣನಿಗೆ ಒಮ್ಮೆಗೇ ಯಾಕೋ ತಾನು ದಿಕ್ಕಿಲ್ಲದವನಾದೆನೆಂದೆನಿಸಿತು. ಉಳಿದ ವಾದ್ಯದವರ ಕಡೆಗೆ ಕಂಗಾಲಾಗಿ ನೋಡಿದ. ಅವರಿಗೂ ಏನು ಹೇಳಲು ತೋಚದೆ ನೀರು ತುಂಬಿದ ಕಣ್ಣುಗಳನ್ನು ಎತ್ತೆತ್ತಗೋ ತಿರುಗಿಸಿದರು. ಕಡೆಗೆ ತಳವಾರ್ರ ಹನುಮನಾಯಕ 'ಅದ್ಯಾಕ್ಲ ಹನುಮಾ, ಹಂಗೆ ಆಕಾಸವೇ ತಲೆಮೇಲೆ ಬಿದ್ದನಂಗಾಡ್ತೀಯ. ಅವರು ಸಂಬಳ ಕೊಟ್ಟರೆಷ್ಟು ಬಿಟ್ಟರೆಷ್ಟು. ಆ... ಮ್ಯಾಗಳ ಸಂಬಳ ತಗಂಡೇ ಬದುಕಬೇಕೇನ್ಲ. ನಡಿ ಅದೇನು ಪಿಂಚಣಿಯೋ ಅದೇನೋ ಅದುನ್ನೂ ನೋಡಿಬಿಡಾಣ' ಎಂದು ಎಬ್ಬಿಸಿ ಕರೆದುಕೊಂಡು ಹೋದ.

ತಾಸೀಲ್ದಾರರು ತಿಳಿಸಿದ್ದ ದಿನಾಂಕದಂದು ತಳವಾರ್ರ ಹನುಮನಾಯಕನೇ ಹನುಮಂತಣ್ಣನನ್ನು ಅವರ ಆಫೀಸಿಗೆ ಕರೆದುಕೊಂಡು ಹೋದ. ಅನೇಕ ಜನಪದ ಕಲಾವಿದರು ಅಲ್ಲಿ ಆಗಲೇ ಸೇರಿದ್ದರು. ತಮ್ಮ ತಮ್ಮ ಸಾಂಪ್ರದಾಯಿಕ ವೇಷವನ್ನು ಹಾಕಿಕೊಂಡು ಬಂದವರೂ ಕೆಲವರಿದ್ದರು. ಹನುಮಂತಣ್ಣನೂ ಹಲಗೆ ತೆಗೆದುಕೊಂಡು ತಲೆಗೊಂದು ಕೆಂಪಿನ ಸೀರೆಯನ್ನು ಸುತ್ತಿಕೊಂಡು ಬಂದಿದ್ದ. ಮನೆಯಿಂದ ಹೊರಡುವ ಮುನ್ನ ಹೆಂಡತಿ 'ಮನೇಲಿ ಓದ್ತಾ ಇರೋ ಮಗಾ ಇದಾನೆ. ಅವನಿಗೇನಾರ ಒಂದು ನೇರ್ಪು ಮಾಡಬೇಕು ಅಂದ್ರೆ ಅಷ್ಟೊ ಇಷ್ಟೋ ದುಡ್ಡು ಬಂದರೆ ಸಾಧ್ಯ. ಹೆಂಗಾರ ಮಾಡಿ ಪಿಂಚಣಿ ಬರಂಗೆ ಕೇಳ್ಕಳಿ' ಎಂದು ಹೇಳಿ ಕಳಿಸಿದ್ದಳು. 'ಆಸಾದಿ ಹನುಮಂತಣ್ಣ ಯಾರ್‍ರಿ? ಒಳಗೆ ಬನ್ನಿ' ಎಂದು ಜಮಾದಾರ ಕರೆದದ್ದಕ್ಕೆ ಹನುಮಂತಣ್ಣ ನಾನೇ ಸ್ವಾಮಿ ಎನ್ನುತ್ತ ಒಳಗೆ ಹೋದ. ದೊಡ್ಡ ಮೇಜಿನ ಸುತ್ತ ಐದಾರು ಜನ ದೊಡ್ಡ ಮನುಷ್ಯರು ಕೂತಿದ್ದರು. ಇಬ್ಬರು ದಡೂತಿ ಹೆಂಗಸರೂ ಇದ್ದರು. ಒಳಗೆ ಬಂದ ಹನುಮಂತಣ್ಣನನ್ನು ಕೂತ್ಗಳಪ್ಪ ಅಂದ್ರು. ಇವನು ಕೂರದೆ ಪರ್ವಾಗಿಲ್ಲ ಸ್ವಾಮಿ ಎಂದು ನಿಂತೇ ಇದ್ದ. ಇವನ ಹೆಸರು ಜಾತಿ ಊರು ಎಲ್ಲ ಬರಕಂಡ ಮೇಲೆ,

'ನಿನ್ನದು ಯಾವ ಕಲೆ?' ಎಂದು ಕೇಳಿದರು.

'ನಾನು ಅಮ್ಮನಗುಡಿಯ ಆಸಾದಿ ಸ್ವಾಮಿ.'

'ಅಂಗಂದ್ರೆ ಏನಪ್ಪ?'

'ಅಮ್ಮನ ಎದುರಿಗೆ ಹಲಗೆ ಬಾರಿಸುತ್ತ ಹೊಗಳಿಕೆ ಪದ, ಬಂಡುಪದ ಹಾಡೋದು ಸ್ವಾಮಿ.'

'ಎಲ್ಲಿ ಹಾಡಿ ತೋರಿಸು.'

'ಯಾವುದು ಹಾಡಲಿ ಸ್ವಾಮಿ, ಹೊಗಳಿಕೆ ಪದಾನೋ ಬಂಡುಪದಾನೋ?'

'ಬಂಡುಪದಾ ಅಂತಾ ಅದೇನೋ ಅಂದ್ಯಲ್ಲ ಅದುನ್ನ ಹಾಡು' ಅಂತಾ ಒಬ್ಬ ದಡೂತಿ ಹೆಂಗಸು ಅಂತು.

ಮೂರು ಸಲ ತಮ ತಮ ಹಲಗೆ ಬಾರಿಸಿದ ಹನುಮಂತಣ್ಣ,

'ನಿನ ಸಟ್ಟಾದಾಗ ಏನಾತು ಅವರ್ಕೆ ಬಾರೆ ನನತಂಗಿ
ಅವರ್ಕೆಗೆ ಬಾರದ ನನತಂಗಿ ಸರದಾನು'

ಎಂದು ಸ್ವರವೆತ್ತಿ ಹಾಡಿದ. ಇನ್ನೊಂದು ಪದಕ್ಕೆ ಹಲಗೆ ಬಡಿದು ಸ್ವರವೆತ್ತುವ ಹೊತ್ತಿಗೆ ಲಾಠಿಚಾರ್ಜು ಆದಂತೆ ಗಾಬರಿಯಿಂದ ಆ ದಡೂತಿ ಹೆಂಗಸರು ಅಲ್ಲಿಂದ ಸಿಕ್ಕ ಸಿಕ್ಕ ಬಾಗಿಲಿನಿಂದ ಹೊರಹೋಗಿಬಿಟ್ಟರು. ತಾಸೀಲ್ದಾರರು ಹನುಮಂತಣ್ಣನನ್ನು ಕೆಕ್ಕರುಗಣ್ಣಿನಿಂದ ನೋಡುತ್ತ 'ಇದನ್ನೇ ಏನಯ್ಯಾ ನೀನು ಕಲ್ತಿರೋದು? ಇದನ್ನೆಲ್ಲ ದೇವರ ಮುಂದೆ ಬ್ಯಾರೆ ಹಾಡ್ತೀನಿ ಅಂತೀಯಲ್ಲ?